ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-560001
ದಿನಾಂಕ;20-09-2017

## ಸುತ್ತೋಲೆ

ವಿಷಯ: ಸ್ವಚ್ಛತಾ ಹೀ ಸೇವಾ ಕಾರ್ಯಕ್ರಮವನ್ನು ಆಯೋಜಿಸುವ ಕುರಿತು.

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: FNO22/NSSFAR/2017-18
ದಿನಾಂಕ: 18-09-2017

*****

ಮೇಲಿನ ವಿಷಯ ಹಾಗು ಉಲ್ಲೇಖಗಳನ್ವಯ, ಕುಡಿಯುವ ನೀರು ಹಾಗೂ ನೈರ್ಮಲ್ಯ ಸಚಿವಾಲಯ ಭಾರತ ಸರ್ಕಾರ ಇವರ ಸ್ವಚ್ಛತಾ ಹೀ ಸೇವಾ ಎಂಬ ಪಾಕ್ಷಿಕವನ್ನು ದಿನಾಂಕ:15-09-2017 ರಿಂದ 02-10-2017 ರ ವರೆಗೆ ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಆಯೋಜಿಸಿರುತ್ತಾರೆ.

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವು ಸಹ ಅನುದಾನಿತ ಮತ್ತು ಸ್ವ-ಆರ್ಥಿಕ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಮೂಲಕ ದಿನಾಂಕ:24-09-2017 ರಂದು ರಾಷ್ಟ್ರೀಯ ಸೇವಾ ಯೋಜನೆ ದಿನದ ಅಂಗವಾಗಿ ಸದರಿ ಅಭಿಯಾನದಲ್ಲಿ ಶುಚಿತ್ವ ಮತ್ತು ರೋಗಮುಕ್ತ ಪರಿಸರ ನಿರ್ಮಿಸುವಲ್ಲಿ ಈ ಕೆಳಕಂಡಂತೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳ ಮೂಲಕ ಭಾಗಹಿಸಲಿದೆ.

01 ಕೈತೊಳೆಯುವುದರಿಂದಾಗುವ ಲಾಭಗಳ ಕುರಿತು, ಫಲಕಗಳೊಂದಿಗೆ ಜಾಗೃತಿ ಜಾಥಾಗಳನ್ನು ಸಂಸ್ಥೆ ಹಾಗೂ ದತ್ತು ಗ್ರಾಮಗಳಲ್ಲಿ ಆಯೋಜಿಸುವುದು.

02 ಪಾಲಿಟೆಕ್ನಿಕ್ ಹಂತದಲ್ಲಿ ಚರ್ಚಾಕೂಟ, ಪ್ರಬಂಧ ಸ್ಪರ್ಧೆ, ವಿಚಾರ ಘೋಷ್ಠಿ, ಭೀತ್ತಿ ಪತ್ರ ರಚನೆಯಂತಹ ಸ್ಪರ್ಧೆಗಳನ್ನು ಏರ್ಪಡಿಸುವುದು.

ಸದರಿ ಕಾರ್ಯಕ್ರಮವು ವಿದ್ಯಾರ್ಥಿ ಸಮೂಹ ಮತ್ತು ಜನ ಸಾಮಾನ್ಯರಲ್ಲಿ ನೈರ್ಮಲ್ಯ ಕುರಿತು ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗುವುದು ಎಂದು ಆಶಿಸಲಾಗಿದೆ. ಸದರಿ ದಿನದಂದು ರಾಜ್ಯದ ಎಲ್ಲಾ ಅನುದಾನಿತ ಮತ್ತು ಸ್ವ-ಆರ್ಥಿಕ ಎನ್ ಎಸ್ ಎಸ್ ಘಟಕಗಳಲ್ಲಿ ಎನ್‌ಎಸ್‌ಎಸ್ ದಿನಾಚರಣೆಯನ್ನು ಆಚರಿಸಲು ಸಂಸ್ಥೆಗಳ ಪ್ರಾಚಾರ್ಯರುಗಳು/ಕಾರ್ಯಕ್ರಮಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಆಚರಿಸಿದ ಬಗ್ಗೆ ಸಂಕ್ಷಿಪ್ತ ವರದಿಯನ್ನು ನಿರ್ದೇಶನಾಲಯದ ಎನ್‌ಎಸ್‌ಎಸ್ ಕೋಶಕ್ಕೆ ಹಾಗೂ ಪ್ರತಿಯನ್ನು nssdte@gmail.com ಗೆ **ಕಳುಹಿಸಲು ತಿಳಿಸಲಾಗಿದೆ.**

ನಿರ್ದೇಶಕರು,

ಪ್ರತಿ:

1) ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ರಾಷ್ಟ್ರೀಯ ಸೇವಾ ಯೋಜನೆಯ ಅನುದಾನಿತ ಹಾಗೂ ಸ್ವ-ಆರ್ಥಿಕ ಘಟಕಗಳ ಪ್ರಾಚಾರ್ಯರ –ಸೂಕ್ತ ಕ್ರಮಕ್ಕಾಗಿ
2) ಪ್ರಾದೇಶಿಕ ನಿರ್ದೇಶಕರು ಕೇಂದ್ರ ಸರ್ಕಾರದ ಪ್ರಾದೇಶಿಕ ಕೇಂದ್ರ # 57/190.ಆರ್‌ವಿ.ರೋಡ್ ಬಸವನಗುಡಿ, ಬೆಂಗಳೂರು–04
3) ಇ–ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು
4) ಕಛೇರಿ ಕಡತ